# ಪಾತ್ರವೇ ಬೇರೆ, ಬದುಕೇ ಬೇರೆ



**ತೇಜಸ್ವಿನಿ ಶೇಖರ್** ಉದಯದ 'ರಾಧಿಕಾ' ನಾಯಕಿ

◆ 'ರಾಧಿಕಾ' ಪಾತ್ರಕ್ಕೆ ಬದಲಿಯಾಗಿ ಬಂದಿದ್ದೀರಿ. ಇಂಥ ಪಾತ್ರಗಳ ಸವಾಲುಗಳು ಏನಿರುತ್ತವೆ?

ಒಂದು ವರ್ಷದ ಹಳೆಯ ಪಾತ್ರವನ್ನು ನಾನು ಒಂದು ತಿಂಗಳಿಂದ ನಿರ್ವಹಿಸುತ್ತಿದ್ದೇನೆ. ಒಬ್ಬರು ನಿಭಾಯಿಸಿದ ಪಾತ್ರವನ್ನು ಮತ್ತೊಬ್ಬರು ತೆಗೆದುಕೊಳ್ಳುವುದು ಸವಾಲಿನ ಕೆಲಸ. ನನಗೆ ಹಿಂದಿನ ರೀತಿಯಲ್ಲೇ ಮಾಡಬಾರದು. ನನ್ನದೇ ಆದ ರೀತಿಯಲ್ಲಿ ನಿರ್ವಹಿಸಬೇಕು ಎನ್ನುವ ಚಿಂತನೆ ಮೊದಲೇ ಇತ್ತು. ಹಾಗಾಗಿ ನಾನು ಸೀರಿಯಲ್ ಮೊದಲಿನ ಭಾಗವನ್ನು ನೋಡಲು ಹೋಗಲಿಲ್ಲ. ಪಾತ್ರದ ವಿವರವನ್ನು ನಿರ್ದೇಶಕರಿಂದ ಪಡೆದು ನನ್ನದೇ ಧಾಟಿಯಲ್ಲಿ ಅನಾವರಣ ಮಾಡಿದೆ. ಅದರಲ್ಲಿ ಏನೆಲ್ಲ ಬದಲಾವಣೆ ಬೇಕು ಎಂದು ಅವರು ಸೂಚಿಸಿದರು. ಅದನ್ನು ಹಾಗೆ ತೆಗೆದುಕೊಂಡು ಹೋಗುತ್ತಿದ್ದೇನೆ. ಪಾತ್ರ ತುಂಬ ಚೆನ್ನಾಗಿದೆ. ತುಂಬ ಇಷ್ಟ ಆಗಿದೆ. ವಿವಿಧ ಪಾತ್ರಗಳನ್ನು ನಿರ್ವಹಿಸಿದ ನನಗೆ ಇದು ಭಿನ್ನ ಎಂದು ಅನ್ನಿಸಿದೆ.

◆ 'ಸೌಭಾಗ್ಯವತಿ'ಯಿಂದ 'ರಾಧಿಕಾ'ತನಕ ನಿಮ್ಮ ಅನುಭವ ಹೇಳಿ.

ನನ್ನ ವೃತ್ತಿ ಜೀವನದ ಪಯಣದಲ್ಲಿ ತೃಪ್ತಿ ಸಿಕ್ಕಿದೆ. ಅದಕ್ಕೆ ಮೂಲ ಕಥೆ ಎಂದು ನಾನು ಹೇಳುತ್ತೇನೆ. ಒಂದಕ್ಕಿಂತ ಒಂದು ಭಿನ್ನ ಪಾತ್ರವನ್ನು ನಿಭಾಯಿಸಿದ್ದೇನೆ. ಒಳ್ಳೆಯ ಪಾತ್ರಗಳೇ ಸಿಕ್ಕಿವೆ. ಇದುವರೆಗೂ ನನ್ನ ಎಲ್ಲ ಪಾತ್ರಗಳಿಗೆ ನ್ಯಾಯ ಕಲ್ಪಿಸಿದ್ದೇನೆ ಎನ್ನುವ ಖುಷಿ ಇದೆ. ಫೇಸ್‌ಬುಕ್‌ನ ನನ್ನ ಫೋಟೊ ನೋಡಿ ನಿರ್ದೇಶಕರೊಬ್ಬರು ಆಡಿಷನ್‌ಗೆ ಆಹ್ವಾನಿಸಿದರು. ಆಗಷ್ಟೇ ನನ್ನ ಡಿಗ್ರಿ ಮುಗಿದಿತ್ತು. ಸಿಎ ಮಾಡುವ ಯೋಚನೆಯಲ್ಲಿದ್ದೆ. ಅದೇ ಸಮಯದಲ್ಲಿ ಫೋನ್ ಕರೆ ಬಂತು ನೋಡೋಣ ಎನ್ನುವ ಮನಸ್ಸಿನಿಂದಲೇ ಬಂದೆ. ನಾನೇ ಆಯ್ಕೆಯೂ ಆದೆ. ಅದು ಮುಗಿದ ನಂತರ ಒಂದಾದ ಮೇಲೆ ಒಂದು ಪಾತ್ರಗಳು ಸಿಕ್ಕಿದ್ದರಿಂದ ಓದನ್ನು ಮುಂದುವರಿಸಲು ಆಗಲಿಲ್ಲ. ಸಿಎ ಮಾಡಬೇಕು ಎನ್ನುವ ಉದ್ದೇಶ ಅಲ್ಲಿಗೆ ನಿಂತಿತು. ಬಣ್ಣವೇ ವೃತ್ತಿಯಾಯಿತು. ಬಹುಶಃ ಬೇರೆ ಯಾವುದೇ ಕೆಲಸ ಮಾಡಿದ್ದರೂ ಇಷ್ಟು ಖುಷಿ ನನಗೆ ಸಿಗುತ್ತಿರಲಿಲ್ಲ ಎಂದುಕೊಂಡಿದ್ದೇನೆ.

◆ 'ಉಧೋ ಉಧೋ... ಯಲ್ಲವ್ವ'ದ ಇಂದುಮತಿಗೂ ರಾಧಿಕಾಳಿಗೂ ಸಂಘರ್ಷ ಆಗುವುದಿಲ್ಲವೆ?

'ಉಧೋ ಉಧೋ' ಬಿಟ್ಟಿದ್ದೇನೆ. ಏಕೆಂದರೆ ಬರ್ತಾ ಬರ್ತಾ ನನ್ನ ಪಾತ್ರಕ್ಕೆ ಅಷ್ಟು ಸ್ಕೋಪ್ ಇಲ್ಲದಾಯಿತು. ಪಾತ್ರ ಪಡೆದ ತಿರುವು ಅಷ್ಟು ಖುಷಿಯನ್ನು ಕೊಡಲಿಲ್ಲ. ಎರಡನ್ನೂ ಮಾಡಿಕೊಂಡು ಹೋಗಬೇಕು ಎಂದುಕೊಂಡಿದ್ದೆ. 'ರಾಧಿಕಾ' ಮತ್ತು ಅದು ಒಂದೇ ಸಮಯಕ್ಕೆ ಇದ್ದಿದ್ದರಿಂದ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಬಂತು. ಸಮಯದ ಬಗ್ಗೆ ಮೊದಲು ನನಗೂ ಗೊತ್ತಿರಲಿಲ್ಲ. ನಿರ್ದೇಶಕರು ಈ ಪಾತ್ರಕ್ಕೆ 'ನಿಮಗೆ ಸೂಕ್ತ ಆಗುತ್ತದೆ ಮಾಡಿ' ಎಂದು ಆಹ್ವಾನಿಸಿದರು. ಹಾಗಾಗಿ ನಾನು ಒಪ್ಪಿದೆ.

◆ ಧಾರಾವಾಹಿಯೊಂದನ್ನು ಚಾನಲ್ ನಿರ್ಮಿಸುವುದಕ್ಕೂ, ಬೇರೆ ಸಂಸ್ಥೆ ನಿರ್ಮಿಸುವುದಕ್ಕೂ ವ್ಯತ್ಯಾಸ?

ವೈಯಕ್ತಿಕವಾಗಿ ಹೇಳಬೇಕು ಎಂದರೆ ನಾನು ಈ ಬಗ್ಗೆ ಯೋಚಿಸುವುದಿಲ್ಲ. ಆ ರೀತಿಯ ಅನುಭವವೂ ನನಗೆ ಇಲ್ಲ. ನಿರ್ಮಾಣದ ಬಗ್ಗೆಯೂ ಅಷ್ಟು ಗೊತ್ತಿಲ್ಲ. ನನ್ನ ಕೆಲಸವನ್ನಷ್ಟೇ ನಾನು ಮಾಡಿಕೊಂಡು ಹೋಗುತ್ತೇನೆ. ವೈಯಕ್ತಿಕವಾಗಿ ಯಾವ ಅನುಬಂಧವನ್ನೂ ಇಟ್ಟುಕೊಳ್ಳುವುದಿಲ್ಲ.

◆ ಮೈದುಂಬಿದ ಪಾತ್ರದಿಂದ ಹೊರ ಬರುವುದು ಹೇಗೆ?

ಸೆಟ್ಟಿಗೆ ಬಂದು ಆ್ಯಕ್ಷನ್ ಅಂದಾಗ ರಾಧಿಕಾ. ಕಟ್ ಎಂದ ತಕ್ಷಣ ನನ್ನ ವಾಸ್ತವದಲ್ಲಿ ಇರುತ್ತೇನೆ. ವೃತ್ತಿ ಬದುಕೇ ಬೇರೆ ಖಾಸಗಿ ಜೀವನವೇ ಬೇರೆ. ನನ್ನ ಕೆಲಸದ ಒತ್ತಡವನ್ನು ಮನೆಯಲ್ಲಿ ಹಾಕುವುದಿಲ್ಲ. ಮನೆಯ ಸಮಸ್ಯೆಯನ್ನು ಸೆಟ್‌ಗೆ ತೆಗೆದುಕೊಂಡು ಬರುವುದಿಲ್ಲ. ನನ್ನ ಕೆಲಸ ಮುಗಿದರೆ ಆಯಿತು. ಅಗತ್ಯ ಇದ್ದರೆ ಮರುದಿನದ ಸಿದ್ಧತೆ ಬಗ್ಗೆ ಯೋಚಿಸುತ್ತೇನೆ. ಕ್ಯಾರೆಕ್ಟರ್‌ನಲ್ಲಿ ಎಂತಹ ದುರಂತ ಸನ್ನಿವೇಶ ಇದ್ದರೂ ಮುಗಿದ ತಕ್ಷಣ ಮುಗಿಯಿತು. ಎಂತಹ ಭಾವುಕ ನೆಲೆಯಲ್ಲಿ ನಟಿಸಿದ್ದರೂ ಕೂಡಲೇ ಅದರಿಂದ ಹೊರ ಬರುತ್ತೇನೆ. ಮನೆಯಲ್ಲಿ ಎಂತಹ ನೋವು ಇದ್ದರೂ ಇಲ್ಲಿ ನಗುತ್ತ ನಟಿಸುವ ಸಂದರ್ಭ ಇದ್ದರೆ ಹಾಗೆಯೇ ಮಾಡುತ್ತೇನೆ.

◆ ಬಿಡುವಿನ ಸಮಯದಲ್ಲಿ ಬೇರೆ ಇನ್ನೇನು ಮಾಡುತ್ತೀರಿ?

ಹಾಡನ್ನು ಹೇಳುತ್ತೇನೆ. ಹಾಗೆಂದು ಸಂಗೀತವನ್ನೇನೂ ಕಲಿತಿಲ್ಲ. ಹಾಡುವುದು ಇಷ್ಟ. ನಟನೆಯನ್ನೂ ನಾನು ಕಲಿತಿರಲಿಲ್ಲ. ಆಕಸ್ಮಿಕ ಪ್ರವೇಶ, ಆದರೂ ಕಷ್ಟ ಅಂತ ಅನ್ನಿಸಲಿಲ್ಲ. ಸ್ಮರಣ ಶಕ್ತಿ ಚೆನ್ನಾಗಿರುವುದರಿಂದ ಡೈಲಾಗ್ ಚೆನ್ನಾಗಿ ನೆನಪಿನಲ್ಲಿ ಉಳಿಯುತ್ತಿತ್ತು. ಭಾವನೆಯನ್ನು ಪ್ರಕಟಿಸುವ ಕಲೆಯನ್ನು ನಿರ್ದೇಶಕರು ಹೇಳಿಕೊಡ್ತಾ ಇದ್ದರು. ಒಬ್ಬೊಬ್ಬ ನಿರ್ದೇಶಕರು ಒಂದೊಂದು ರೀತಿಯಲ್ಲಿ ಕಲಿಸಿದ್ದಾರೆ. ಈಗ ಪೆಟ್ ಸಾಕಿದ್ದೇವೆ. ಅದರ ಕಾಳಜಿಯನ್ನು ಮಾಡುತ್ತೇನೆ.

◆ ಸಾಮಾಜಿಕ ಮಾಧ್ಯಮವನ್ನು ಹೇಗೆ ನಿರ್ವಹಿಸುತ್ತೀರಿ?

ಫೇಸ್‌ಬುಕ್‌ನಲ್ಲಿ ಅಷ್ಟು ಕ್ರಿಯಾಶೀಲವಾಗಿಲ್ಲ. ಯಾವತ್ತಾದರೂ ಒಂದೊಂದು ಫೋಟೊ ಹಾಕುತ್ತೇನೆ. ಇನ್‌ಸ್ಟಾಗ್ರಾಂನಲ್ಲಿ ಹೆಚ್ಚು ಕಾಣಿಸಿಕೊಳ್ಳುತ್ತೇನೆ. ಮೊದಲು ರೀಲ್ಸ್ ಮಾಡ್ತಿದ್ದೆ ಈಗ ಅದನ್ನೂ ಮಾಡಲು ಆಗುತ್ತಿಲ್ಲ. ಅನೇಕರು ಅಲ್ಲಿ ಪ್ರತಿಕ್ರಿಯೆಗಳನ್ನು ನೀಡುತ್ತಾರೆ. ಎಲ್ಲರೂ ಧನಾತ್ಮಕ ಕಾಮೆಂಟ್ ಮಾಡುವುದು ವಿಶೇಷ. ನನ್ನ ಉಡುಗೆ ತೊಡುಗೆಯನ್ನು ಪ್ರಶಂಸಿಸುತ್ತಾರೆ. 'ಸಂಘರ್ಷ' ಧಾರಾವಾಹಿ ಮಾಡುತ್ತಿದ್ದಾಗ ತುಂಬ ಕಾಮೆಂಟ್ ಬರ್ತಾ ಇದ್ದವು. 'ರಾಧಿಕಾ' ಚೆನ್ನಾಗಿ ಬರ್ತಾ ಇದೆ. ನೀವು ಬಂದಿದ್ದು ಖುಷಿ ಆಯಿತು ಎಂದೂ ಹೇಳಿದ್ದಾರೆ. ಫ್ಯಾನ್ಸ್ ಪೇಜ್‌ಗಳಲ್ಲಿಯೂ ವಿಡಿಯೊಗಳನ್ನು ಅಪ್‌ಲೋಡ್ ಮಾಡುತ್ತಾರೆ.

■ ರಾಘವೇಂದ್ರ ಕೆ.